C.R.P.67

Form No.4
(Civil)
Deposition
Sheets
(R.P.No.57)

**6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್ ಸಿ ಸಂಖ್ಯೆಃ 296/2018**

**ಪ್ರಾಸಾ. 31 ಚಾಸಾ. 17**

**ಸಾಕ್ಷಿದಾರರ ಹೆಸರು** : ಅರುಣ್ ಕುಮಾರ್ ಕೆ
**ತಂದೆಯ ಹೆಸರು** : ಕಾಳಪ್ಪ
**ವಯಸ್ಸು** : 37 ವರ್ಷಗಳು
**ಉದ್ಯೋಗ** : ವ್ಯವಸಾಯ
**ವಾಸ** : ಮಳ್ಳೂರು.

**ಪ್ರಮಾಣ ವಚನ ಬೋಧಿಸಿದ ದಿನಾಂಕಃ 19.03.2025**

**ಮುಖ್ಯ ವಿಚಾರಣೆಃ ಮಾನ್ಯ ಪ್ರಭಾರಿ ಸರ್ಕಾರಿ ಅಭಿಯೋಜಕರಿಂದಃ**

ಮೃತಪಟ್ಟ ಕವಿತಾ ನನ್ನ ದೊಡ್ಡಮ್ಮನ ಮಗಳಾಗಿದ್ದು, ನನಗೆ ಆಕೆ ಸಹೋದರಿ ಆಗಬೇಕು. ಆಕೆ 2017 ರಲ್ಲಿ ಮೃತಪಟ್ಟಿರುತ್ತಾಳೆ. ಚಾಸಾ-16 ನನಗೆ ಗೊತ್ತು. ಚಾಸಾ-9 ಮತ್ತು 19 ನನಗೆ ಗೊತ್ತು.

2. ಈಗ ತೋರಿಸಿದ ನಿಶಾನೆ ಪಿ-17 ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯ ಸಹಿಯನ್ನು ನಿಶಾನೆ ಪಿ-17(ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ನಾನು ದಿನಾಂಕ 19.11.2017 ರಂದು ಕೊಲಂಬಿಯಾ ಏಷಿಯಾ ಆಸ್ಪತ್ರೆ, ವೈಟ್‌ಫೀಲ್ಡ್ ನಲ್ಲಿ ಸಹಿ ಮಾಡಿರುತ್ತೇನೆ.

ಸದರಿ ಆಸ್ಪತ್ರೆಗೆ ಪೊಲೀಸರು ನನ್ನನ್ನು ಕರೆಸಿರುತ್ತಾರೆ. ನನ್ನ ಜೊತೆ ಚಾಸಾ-16, 18 ಮತ್ತು ಚಾಸಾ-19 ರವರನ್ನು ಕರೆಸಿದ್ದರು. ನಮ್ಮನ್ನು ಶವಾಗಾರಕ್ಕೆ ಕರೆದುಕೊಂಡು ಹೋಗಿದ್ದು ಅಲ್ಲಿ ನನ್ನ ಸಹೋದರಿ ಕವಿತಾಳ ಶವವನ್ನು ತೋರಿಸಿರುತ್ತಾರೆ. ಶವದ ದೇಹದ ಮೇಲೆ ಹೊಟ್ಟೆಯ ಭಾಗದಲ್ಲಿ ಚಾಕುವಿನಿಂದ ತಿವಿದಿರುವ ಗಾಯವಾಗಿರುತ್ತದೆ. ಮೃತಳ ಶರೀರವನ್ನು ಆಕೆಯ ಮಗನಾದ ನವನೀತ್ ಎಂಬುವವನು ಗುರುತಿಸಿರುತ್ತಾರೆ. ಈ ಬಗ್ಗೆ ಪೊಲೀಸರು ನಮ್ಮನ್ನು ವಿಚಾರಿಸಿರುತ್ತಾರೆ. ಶವದ ಮೇಲಿನ ಗಾಯಗಳನ್ನು ನೋಡಿ ನಮಗೆ ಆಕೆ ಕೊಲೆಯಾಗಿರಬಹುದು ಎಂದು ಸಂಶಯವಾಗಿರುತ್ತದೆ. ಅದನ್ನು ಪೊಲೀಸರ ಮುಂದೆ ಹೇಳಿ, ಮರಣೋತ್ತರ ಪರೀಕ್ಷೆ ಮಾಡಲು ಕೇಳಿರುತ್ತೇವೆ. ನಿಶಾನೆ ಪಿ-17 ಕ್ಕೆ ನನ್ನೊಂದಿಗೆ ಚಾಸಾ-16 ಮತ್ತು 18 ರವರು ಸಹಿ ಮಾಡಿರುತ್ತಾರೆ.

<u>ಪಾಟೀ ಸವಾಲುಃ ಶ್ರೀ ಎಮ್.ಪಿ. ವಕೀಲರಿಂದ ಆರೋಪಿತರ ಪರವಾಗಿಃ</u>

ಪೊಲೀಸರು ನಮ್ಮನ್ನು ಶವಪಂಚನಾಮೆಗೆ ನೋಟಿಸ್ ಕೊಟ್ಟು ಕರೆದಿರುವುದಿಲ್ಲ. ನಾವೇ ಆಸ್ಪತ್ರೆ ಬಳಿ ಇದ್ದೆವು. ಪೊಲೀಸರು ನಮಗೆ ಶವವನ್ನು ತೋರಿಸಿರುವುದಿಲ್ಲ, ನಾವು ನೋಡಿರುವುದಿಲ್ಲ, ಮೃತಳ ಶರೀರದ ಮೇಲೆ ಗಾಯಗಳು ಹೊಟ್ಟೆ ಭಾಗದಲ್ಲಾಗಲೀ, ಇತರ ಭಾಗಗಳಲ್ಲಾಗಲೀ ಕಂಡು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಮೃತಳು ನನ್ನ ಸಹೋದರಿಯಾದ ಕಾರಣ ನಾನು ಆ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಶವ ತನಿಖೆ ಮಾಡಿಲ್ಲ, ನಾನು ಪಂಚನಾಗಿ ರುಜು ಮಾಡಿಲ್ಲ, ನನ್ನೊಂದಿಗೆ ಬೇರೆಯವರು ಸಹ ಯಾರು ಹಾಜರಿರಲಿಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ-17 ದಾಖಲೆಯನ್ನು ಪೊಲೀಸ್ ಠಾಣೆಯಲ್ಲಿ ಸಿದ್ಧಪಡಿಸಿದ್ದು, ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಶಪಡಿಸಿಕೊಂಡ ಬಟ್ಟೆಗಳು ಆರೋಪಿತರಿಗೂ ಯಾವುದೇ

ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ದೇವಾನಂದ)
6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.